ಆದಾಗ್ಯೂ ಸಹ ಬೇರೆ ಬೇರೆ ವ್ಯವಸ್ಥೆಯಿಂದ ನೀರು ಸಂಗ್ರಹ ಮಾಡಿಕೊಂಡು ಅಕ್ಷರ ದಾಸೋಹ ಕಾರ್ಯಕ್ರಮ ಸಮರ್ಪಕವಾಗಿ ನಡೆಸಲಾಗುತ್ತಿದೆ.

ಇ) ಒಟ್ಟಾರೆ ಬೇಡಿಕೆಯನ್ನು ಗಮನಿಸಿ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸಲು ₹ 147.00ಕೋಟಿಗಳ ಅನುದಾನವನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಸವಿವರ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದು, ಅನುದಾನ ಒದಗಿಸಿದ ತಕ್ಷಣ ಆದ್ಯತೆಯ ಮೇರೆಗೆ ಒದಗಿಸಲಾಗುವುದು.

ಮನೆಗಳ ನೋಂದಣಿ

1489(2559), ಶ್ರೀ ಮಹೇಶ್ ಎಸ್.ಆರ್.(ಕೃಷ್ಣರಾಜನಗರ)

ಅ) ಪಂಚಾಯತ್ ರಾಜ್ ಇಲಾಖೆಯಿಂದ ಬಡ ಜನರ ಅನುಕೂಲಕ್ಕೆಂದು ಮಂಜೂರು ಮಾಡಲಾಗಿರುವ ಮನೆಗಳ ನೋಂದಣಿ ಕಾರ್ಯದಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಮನೆಗಳು ನೋಂದಣಿಯಾಗದೇ ಇರಲು ಕಾರಣವೇನು?

ಇ) ನೋಂದಣಿ ಕಾರ್ಯದಲ್ಲಿ ಆಗುತ್ತಿರುವ ತೊಂದರೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಕೆ.ಪಾಟೀಲ್(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬಂದಿದೆ.

ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ.12278/2007 ರಲ್ಲಿ ಅನಧಿಕೃತ ಆಸ್ತಿಗಳ ನೊಂದಣಿಯನ್ನು ತಡೆಯಲು ವ್ಯಾಪಕವಾದ ಸಮಗ್ರ ನೀತಿಯನ್ನು ಜಾರಿಗೆ ತರುವುದಕ್ಕೆ ಕಂದಾಯ,

ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಇಲಾಖೆಗೆ ಡಿಸೆಂಬರ್ 2012 ರಲ್ಲಿ ನಿರ್ದೇಶನ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ, ಅನಧಿಕೃತ ಆಸ್ತಿಗಳ ನೊಂದಣಿ ತಡೆಗಟ್ಟಲು ರಾಜ್ಯದ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 9, 11ಎ ಮತ್ತು 11ಬಿ ಗಳನ್ನು ದಿನಾಂಕ:15.06.2013 ರಿಂದ ಇ–ಸ್ವತ್ತು ತಂತ್ರಾಂಶದ ಮೂಲಕ ಮಾತ್ರ ವಿತರಿಸುತ್ತದೆ.

ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ 1) ಗ್ರಾಮ ಠಾಣಾ ವ್ಯಾಪ್ತಿಯೊಳಗಿರುವ ಆಸ್ತಿ/ನಿವೇಶನ, 2) ವಸತಿ ಯೋಜನೆಯಡಿ ಸೃಜಿಸಿರುವ ಆಸ್ತಿ, 3) ಭೂ ಪರಿವರ್ತನೆಯಾದ ವ್ಯವಸಾಯದ ಜಮೀನಿನಲ್ಲಿ ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯೊಂದಿಗೆ ಸೃಜಿಸಲಾದ ಆಸ್ತಿಗಳು ಮತ್ತು 4) Single Plot Approval ನಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ಪಡೆದ ಆಸ್ತಿಗಳಿಗೂ ನಮೂನೆ–9, ನಮೂನೆ–11ಎ ಗಳನ್ನು ನೀಡಲಾಗುತ್ತಿದೆ.

ಕ್ರಮಬದ್ಧವಲ್ಲದ ಆಸ್ತಿಗಳಿಗೆ 1) ದಿನಾಂಕ:14.06.2013 ಕ್ಕಿಂತ ಮುಂಚೆ 1, 2 ಅಥವಾ 3 ಬಾರಿ ಮಾರಾಟ ಹಾಗೂ ಕ್ರಯಗಳಿಗೆ ಒಳಪಟ್ಟಿರುವ ನಿವೇಶನಗಳು, 2) ದಿನಾಂಕ:14.06.2013ಕ್ಕೆ ಮೊದಲು ಕಟ್ಟಡವಾಗಿದ್ದು, ಈ ದಿನಾಂಕಕ್ಕಿಂತ ಮುಂಚಿನ 6 ತಿಂಗಳ ಪೂರ್ವದ ಯಾವುದಾದರೂ ಒಂದು ತಿಂಗಳ ವಿದ್ಯುಚ್ಛಕ್ತಿ ಬಿಲ್‌ನ್ನು ಒದಗಿಸಿರುವ ಪ್ರಕರಣಗಳು, 3) ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಪ್ರಕರಣ 95 (1) ರನ್ವಯ ಫಾರಂ ಬಿಲ್ಡಿಂಗ್ / ಹೌಸ್ ಎಂದು ಪರಿಗಣಿಸುವ ಆಸ್ತಿಗಳು ಮತ್ತು 4) ಕರ್ನಾಟಕ ಭೂ ಕಂದಾಯ ಅಧಿನಿಯಯಮ 1964ರ ಪ್ರಕರಣ 95 (2) ರನ್ವಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ–11ಬಿ ಅನ್ನು ಪಡೆದು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಬಹುದಾಗಿದೆ.

ಇ-ಸ್ವತ್ತು ತಂತ್ರಾಂಶದ ಮೂಲಕ ವಿತರಿಸಿದ ನಮೂನೆ 9, 11ಎ ಮತ್ತು 11ಬಿ ಗಳನ್ನು ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಲು ಪರಿಗಣಿಸಲಾಗುತ್ತಿದೆ.

ಆ) ಇ-ಸ್ವತ್ತು ಪ್ರಕ್ರಿಯೆಯಲ್ಲಿ ಸಾರ್ವಜನಿಕರು ನಮೂನೆ-9, 11ಎ ಮತ್ತು 11ಬಿ ನ್ನು ಪಡೆಯಲು ಗ್ರಾಮ ಪಂಚಾಯತಿಗಳಿಗೆ ಅರ್ಜಿ ಸಲ್ಲಿಸುವ ಎಲ್ಲರಿಗೂ ನಮೂನೆಗಳನ್ನು ವಿತರಿಸುವ ಕಾರ್ಯವನ್ನು ಕೈಗೊಂಡಿದೆ. ಇ-ಸ್ವತ್ತು ತಂತ್ರಾಂಶದಿಂದ ಆನ್‌ಲೈನ್ ಮೂಲಕ ಡಿಜಿಟಲ್ ಸಿಗ್ನೇಚರ್‌ನೊಂದಿಗೆ ನಮೂನೆ-9, 11ಎ ಮತ್ತು ನಮೂನೆ-11ಬಿ ನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ ನೀಡುತ್ತಾರೆ. ಇದನ್ನು 45 ದಿನಗಳೊಳಗಾಗಿ ಅರ್ಜಿದಾರರು ನಿಯಮಗಳ ಪ್ರಕಾರ ಎಲ್ಲಾ ದಾಖಲಾತಿಗಳನ್ನು ಒದಗಿಸಿದಲ್ಲಿ ನೀಡಲಾಗುತ್ತದೆ.

ಇ) ಇ-ಸ್ವತ್ತು ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿ ಆಸ್ತಿಗಳಿಗೆ ನಮೂನೆ-9, 11ಎ ಮತ್ತು 11ಬಿ ಗಳನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.

1. ಕೆಲವು ಮಾನ್ಯ ಸಚಿವರುಗಳು ಹಾಗೂ ಶಾಸಕರುಗಳನ್ನು ಒಳಗೊಂಡಂತೆ ಸಭೆ ನಡೆಸಿ, ಅವರುಗಳಿಂದ ಸಲಹೆಗಳನ್ನು ಪಡೆಯಲಾಗಿದೆ.
2. ದಕ್ಷಿಣ ಕನ್ನಡ, ಕೊಡಗು, ಉತ್ತರಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇ-ಸ್ವತ್ತು ತಂತ್ರಾಂಶದಲ್ಲಿ ಆಸ್ತಿಗಳನ್ನು ಮಾರಾಟ ಮಾಡಲು ಮತ್ತು ವಿಭಾಗ ಮಾಡಲು ಅವಕಾಶ ಕಲ್ಪಿಸಲಾಗಿದೆ.
3. ಪ್ಲಾಟ್‌ಗಳಲ್ಲಿನ ಕಟ್ಟಡಗಳು ಮತ್ತು ನಿವೇಶನಗಳು ಹಾಗೂ ಕೈಗಾರಿಕಾ ಪ್ರದೇಶದಲ್ಲಿ ಬರುವ ವಸತಿ ಸಮುಚ್ಛಯಗಳಿಗೆ ಇ-ಸ್ವತ್ತು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

4. ಸುತ್ತೋಲೆಗಳ ಮೂಲಕ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.
5. ಸ್ಯಾಟ್‌ಕಾಮ್ ಮೂಲಕ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ.
6. ಆಡಳಿತಾತ್ಮಕ ಮತ್ತು ತಾಂತ್ರಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳಿಗೆ ಉತ್ತರಗಳನ್ನು (FAQ) ಇಲಾಖೆಯ ಅಧಿಕಾರಿಗಳು ಮತ್ತು ಎನ್.ಐ.ಸಿ. ಅಧಿಕಾರಿಗಳಿಂದ ನೀಡಲು ಕ್ರಮ ವಹಿಸಲಾಗಿದೆ.
7. ಕ್ರಮಬದ್ಧ ಆಸ್ತಿಗಳಿಗೆ ನಮೂನೆ–9, 11ಎ ಮತ್ತು ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ–11ಬಿ ಯನ್ನು ಮಾತ್ರ ನೊಂದಣಿಗೆ ಪರಿಗಣಿಸಲು ಹಾಗೂ ನಮೂನೆ–9 ಕ್ಕೆ ನಮೂನೆ–11ಬಿ ರ ಅವಶ್ಯಕತೆ ಇಲ್ಲವೆಂದು ಉಪನೊಂದಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.
8. ದಿನಾಂಕ:23.06.2014ರಂದು ಉತ್ತರ ಕನ್ನಡದ ಅರಣ್ಯ ಪ್ರದೇಶದಲ್ಲಿನ ಆಸ್ತಿಗಳಿಗೆ ಸಂಬಂಧಪಟ್ಟಂತೆ ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳ ಸಭೆಯನ್ನು ನಡೆಸಲಾಗಿದೆ.

ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿ

1490(2352), ಶ್ರೀ ಮಕಬುಲ್ ಎಸ್.ಬಾಗವಾನ್ (ಬಿಜಾಪುರ ನಗರ)

ಅ) ಕಳೆದ ಮೂರು ವರ್ಷಗಳಲ್ಲಿ ವಿಜಾಪುರ (ನಗರ) ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತ್‌ಗಳಿಗೆ ಉದ್ಯೋಗ ಖಾತ್ರಿ ಯೋಜನೆಗೆ ಮಂಜೂರಾದ ಅನುದಾನವೆಷ್ಟು; (ವಿವರ ನೀಡುವುದು);